# ಶಿವಶರಣರ ದೃಷ್ಟಿಯಲ್ಲಿ ಆರ್ಥಿಕ ಸಿದ್ಧಾಂತ

**ಶಂಭುಲಿಂಗ ಹುಬ್ಬಳ್ಳಿ**

ಸಂಶೋಧನಾ ವಿದ್ಯಾರ್ಥಿ, ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Received: 26-02-2024 ; Accepted: 16-03-2024 ; Published: 07-05-2024**

**DOI: https://doi.org/10.5281/zenodo.11127274**

## ABSTRACT:

12ನೇ ಶತಮಾನದಲ್ಲಿ ಬಸವಾದಿ ಶಿವಶರಣರು ಅಂದಿನ ಸಮಾಜದ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತಹ ಸುಧಾರಣೆಯನ್ನು ತರಲು ಬಯಸಿದರು. ಪ್ರತಿಯೊಬ್ಬ ವ್ಯಕ್ತಿಯೂ ಕಾಯಕದಲ್ಲಿ ತೊಡಗಬೇಕು. ಆ ಕಾಯಕದಿಂದ ಬಂದ ಹಣದಿಂದ ತನ್ನ ಅಗತ್ಯತೆಗಳನ್ನು ಪೂರೈಸಿಕೊಂಡು ಉಳಿದ ಹಣವನ್ನು ಸಾಮಾಜಿಕ ಕಾರ್ಯಗಳಿಗೆ ಸದ್ವಿನಿಯೋಗ ಮಾಡಬೇಕು ಎಂಬುದು ಶರಣರ ಆಲೋಚನೆಯಾಗಿತ್ತು. ಜೊತೆಗೆ ಸಮಾಜದಲ್ಲಿನ ಸಂಪತ್ತು ಎಲ್ಲ ಜನರಿಗೆ ಸಮಾನವಾಗಿ ಹಂಚಿಕೆ ಆಗಬೇಕು ಎಂಬ ಪರಿಕಲ್ಪನೆಯನ್ನು ಹೊಂದಿದ್ದರು. ಅಂತೆಯೆ 'ಶಿವಶರಣರ ದೃಷ್ಟಿಕೋನದಲ್ಲಿ ಆರ್ಥಿಕ ಸಿದ್ಧಾಂತ' ಎಂಬ ಈ ಲೇಖನದಲ್ಲಿ ಅರ್ಥಶಾಸ್ತ್ರದ ಪರಿಕಲ್ಪನೆಗಳಾದ ಕೃಷಿ, ಉದ್ಯೋಗ, ಉತ್ಪಾದನೆ, ವಿತರಣೆ, ಆದಾಯ, ಅನುಭೋಗ, ಉಳಿತಾಯ ಮುಂತಾದ ಅಂಶಗಳ ಬಗ್ಗೆ ಬೆಳಕನ್ನು ಚೆಲ್ಲಲಾಗಿದೆ. ಉತ್ಪಾದನಾ ಸಿದ್ಧಾಂತದಲ್ಲಿ ಕಾಯಕವು ಮಹತ್ವದ ಪಾತ್ರವನ್ನು ವಹಿಸುತ್ತದೆ. 'ಕಾಯಕವೇ ಕೈಲಾಸ' ಎಂಬ ಶರಣರ ಸಿದ್ಧಾಂತವನ್ನು ಅರ್ಥಶಾಸ್ತ್ರ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸಲಾಗಿದೆ. ಅಂದರೆ ಸಮಾಜದಲ್ಲಿ ಆರ್ಥಿಕ ಸಮಾನತೆಯು ಸಮಾಜದ ಏಳಿಗೆಗೆ ಭದ್ರ ಬುನಾದಿ ನೀಡುತ್ತದೆ ಎಂಬ ವಿಷಯದ ಬಗ್ಗೆ ವಿವರಿಸಲಾಗಿದೆ. ಪ್ರಸ್ತುತ ಆಧುನಿಕ ಅರ್ಥವ್ಯವಸ್ಥೆ ಮತ್ತು ಶರಣರ ಆರ್ಥಿಕ ಚಿಂತನೆಗಳಲ್ಲಿ ಹಣ ಬದುಕಿನ ಅವಿಭಾಜ್ಯ ಅಂಗ ಎಂಬುದನ್ನು ಅಲ್ಲಗಳೆದು ಸಂಪತ್ತಿನ ಸಂಗ್ರಹವನ್ನು ಸಮಾಜದ ಅಭಿವೃದ್ಧಿಗೆ ತೊಡಗಿಸಿದಲ್ಲಿ ದೇಶದ ಕಲ್ಯಾಣ ಸಾಧ್ಯವೆಂಬ ಅರ್ಥ ಶಾಸ್ತ್ರದ ತತ್ವ ಸಿದ್ಧಾಂತವನ್ನು ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ.

## KEYWORDS:

ಕಾಯಕ, ಕೈಲಾಸ, ಸಂಪತ್ತು, ದಾಸೋಹ, ಬಿಜ್ಜಳನ ಭಂಡಾರ, ಚೇಳು.

ವಚನ ಸಾಹಿತ್ಯ ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಶರಣರು ವಚನಗಳ ಮೂಲಕ ಜನಸಾಮಾನ್ಯರಲ್ಲಿ ಭಿತ್ತಿದ ವೈಚಾರಿಕಕ್ರಾಂತಿ ಹೊಸ ಮನ್ವಂತರವನ್ನೇ ಸೃಷ್ಟಿಸಿದೆ. ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಹಾಗೂ ಆರ್ಥಿಕ ಸಿದ್ಧಾಂತಗಳನ್ನು ಒಳಗೊಂಡ ಶರಣರ ವಚನಗಳು ನಮಗೆ ಇಂದಿಗೂ ಪ್ರಸ್ತುತವಾಗಿವೆ. ನೋಯುವ ಹಲ್ಲಿಗೆ ನಾಲಿಗೆ ಹೇಗೆ ಮೇಲಿಂದ ಮೇಲೆ ತಾಗುತ್ತದೆಯೋ ಹಾಗೇ ಇಂದಿನ ಸಮಾಜವನ್ನು ವಚನಗಳು ತಾಗುತ್ತಿವೆ. 'ಕಾಯಕವೇ ಕೈಲಾಸ' ಎಂದು ಹೇಳುವ ಮೂಲಕ ಜನರಿಗೆ ದುಡಿಮೆಯ ದಾರಿ ತೋರಿಸಿದ ಕೀರ್ತಿ ಶಿವಶರಣರದ್ದು.

ಕನ್ನಡ ನಾಡಿನಲ್ಲಿ ವಚನ ಒಂದು ಚಳುವಳಿಯಾಗಿ ಕಾಣಿಸಿಕೊಂಡಿದೆ. ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಪರಿಶುದ್ಧ ಜೀವನಕ್ಕೆ ಬೇಕಾದ ಎಲ್ಲ ಸಂಗತಿಗಳು ಅಡಕವಾಗಿವೆ. ವಚನಗಳಲ್ಲಿ ಏನಿದೆ ಎನ್ನುವುದಕ್ಕಿಂತ ಏನಿಲ್ಲ ಎಂದರೆ ಹೆಚ್ಚು ಅರ್ಥ ಪೂರ್ಣವಾಗುತ್ತದೆ. ಅರ್ಥವ್ಯವಸ್ಥೆ ಎಂದರೆ ಸಾಮಾನ್ಯ ಅರ್ಥದಲ್ಲಿ 'ಹಣಕಾಸು ನಿರ್ವಹಣೆ' ಎಂದರ್ಥ. ಒಬ್ಬ ವ್ಯಕ್ತಿಯಿಂದ ಹಿಡಿದು ಕುಟುಂಬ, ಗ್ರಾಮ, ರಾಜ್ಯ, ರಾಷ್ಟ್ರಗಳ ನಿರ್ವಹಣೆಯ ತನಕ ಅರ್ಥವ್ಯವಸ್ಥೆಯ ಜಾಡು ಹರಡಿಕೊಂಡಿರುತ್ತದೆ. ನಮ್ಮ ಇಡೀ ಜೀವನದಲ್ಲಿ ಅರ್ಥವ್ಯವಸ್ಥೆ ಹಾಸು ಹೊಕ್ಕಾಗಿದೆ. ಅರ್ಥವ್ಯವಸ್ಥೆಯ ಮೂಲ ಅಡಗಿರುವುದು ಹಣ ಸಂಪಾದನೆಯಲ್ಲಿ, ಈ ಹಣದ ಸಂಪಾದನೆಯ ಮೂಲ ದುಡಿಮೆ ಸತ್ಯ ಮತ್ತು ಶುದ್ಧ ದುಡಿಮೆಯ (ಕಾಯಕ) ಮೂಲಕ ಹಣ ಸಂಪಾದಿಸಬೇಕು, ಸಂಪಾದಿಸಿದ ಹಣಕ್ಕೆ ತೆರಿಗೆಕಟ್ಟಬೇಕು, ಅಂತಹ ಹಣವನ್ನು ವೈಯಕ್ತಿಕ ಹಾಗೂ ಕುಟುಂಬ ನಿರ್ವಹಣೆಗೆ ಬಳಸಬೇಕು. ಜೊತೆಗೆ ಸಮಾಜಮುಖಿ ಕಾರ್ಯಗಳಿಗೆ ತನ್ನಿಂದಾದಷ್ಟು ಧನವನ್ನು ಸವೆಸಬೇಕು. ಇದು ಪ್ರತಿಯೊಬ್ಬ ವ್ಯಕ್ತಿಯು ಪಾಲಿಸಬೇಕಾದ ಅರ್ಥವ್ಯವಸ್ಥೆಯಾಗಿದೆ.

ಮಾನವನ ತನ್ನ ಜೀವನ ನಿರ್ವಹಣೆಗೆ ಹಣ ಪ್ರಮುಖವಾಗಿದ್ದು, ಅದು ಸಮಾಜದ ಉತ್ಪಾದನೆ, ವಿನಿಮಯ ಹಂಚಿಕೆಗೆ ಸಂಬಂಧಪಟ್ಟಿದೆಯಲ್ಲದೇ, ಉದ್ಯೋಗ ಹಾಗೂ ವರಮಾನಕ್ಕೂ ಆಧಾರವಾಗಿದೆ. ಇಡೀ ರಾಷ್ಟ್ರದ ಇತಿಹಾಸದಲ್ಲೇ ಪ್ರಪ್ರಥಮವಾಗಿ ಒಂದು ಕ್ರಮಬದ್ಧ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದತಹ ಕೀರ್ತಿ ಬಸವಾದಿ ಶಿವಶರಣರಗೆ ಸಲ್ಲುತ್ತದೆ.

**"ಕಾಯಕದಲ್ಲಿ ನಿರತನಾದಡೆ**
**ಗುರುದರ್ಶನವಾದಡೂ ಮರೆಯಬೇಕು**
**ಲಿಂಗಪೂಜೆಯಾದಡೂ ಮರೆಯಬೇಕು**

**ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು**
**ಕಾಯಕವೇ ಕೈಲಾಸವಾದಕಾರಣ**
**ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು"[1]**

ಶಿವಶರಣರು 'ಕಾಯಕವೇ ಕೈಲಾಸ'ವೆಂದು ಹೇಳಿರುವಾಗ ಗುರು, ಲಿಂಗ, ಜಂಗಮ ಈ ಮೊದಲಾದವುಗಳ ಹಂಗಾದರೂ ಏತಕ್ಕೆ? ಆಗ ಕಾಯಕವೊಂದ ರಿಂದಲೇ ಎಲ್ಲವೂ ಸಿದ್ಧಿಸುತ್ತದೆ. 'ಕಾಯಕ' ಎಂಬ ಮಾತಿನ ಅರ್ಥ ವ್ಯಾಪ್ತಿಯನ್ನು ಮರೆತಾಗ ಅದಕ್ಕೆ ಹೊಟ್ಟೆಪಾಡಿನ ಉದ್ಯೋಗವೆಂದು ಅರ್ಥವೂ ಬರುವುದ ರಿಂದ ಈ ಸಂದೇಹ ತಲೆದೋರುವುದು ಸಹಜ. ಪ್ರತಿಯೊಬ್ಬರೂ ತಮ್ಮ ಜೀವನ ನಿರ್ವಹಣೆಗಾಗಿ ಉದ್ಯೋಗ ಮಾಡುವುದು ಅನಿವಾರ್ಯ ಎಂಬ ಅರ್ಥವು ತಿಳಿದುಬರುತ್ತದೆ.

ಕಾಯಕದಲ್ಲಿ ಪವಿತ್ರತೆಯು ಕೂಡಿರಬೇಕು. ಪರರ ಮನಸ್ಸಿಗೆ ತೊಂದರೆ ಮಾಡಿ, ಮೋಸಮಾಡಿ, ಸುಳ್ಳು ಹೇಳಿ ಹಣವನ್ನು ತರುವ ಕಾಯಕವು ಶಿವಶರಣ ರಿಗೆ ಸರಿಯೆನಿಸದು. ಸಮಾಜದಲ್ಲಿ ವ್ಯಕ್ತಿಯ ಗೌರವ, ವ್ಯಕ್ತಿತ್ವ, ಉತ್ತಮವಾದ ಆತನ ಜೀವನದ ಸಂಕೇತವಾಗಿದೆ. ಅದೇ ಒಳ್ಳೆಯ ಮಾರ್ಗವಾಗಿದೆ. ಕಳ್ಳತನದ, ಕೆಟ್ಟತನದ ಸಂಪಾದನೆಯೂ ಒಳ್ಳೆಯದಲ್ಲ ಎಂದು ತಿಳಿಯಬಹುದಾಗಿದೆ. ವ್ಯಕ್ತಿಯು ಆಸೆಯ ಬೆನ್ನು ಹತ್ತಿ ಕೈಗೆ ಸಿಗದನ್ನು ಪಡೆಯಲು ಹೋಗಿ ತನ್ನ ಶ್ರಮ, ಪರಿಶ್ರಮ, ಸಮಯ ಹಾಳು ಮಾಡಿಕೊಂಡಂತೆ, ಸಹಜವಾಗಿ ಸತ್ಯದಿಂದ ಹಣ ಸಂಪಾದನೆಯನ್ನು ಮಾಡಿದರೆ ಬದುಕು ಬಂಗರವಾಗುವುದು. ಜೀವನದಲ್ಲಿ ಅಂತರಂಗದಲ್ಲಿ ಇರುವ ನೀತಿಯು ಮೌಲಿಕವಾದದ್ದು.

**"ಎಳ್ಳಿಲ್ಲದ ಗಾಣದಲ್ಲಿಎಣ್ಣೆಯಂತೆ**
**ಒಳ್ಳು ತೂರಿದಲ್ಲಿ ಭಕ್ತವುಂಟೆ?**
**ಕಳ್ಳ ಹಾದರಿಗರ ಸಂಪಾದನೆ**
**ಹೊಳ್ಳ ಕುಟ್ಟಿ ಕೈ ಹೋಟೆಯಾದಂತೆ**
**ಕಾಣಾ ರಾಮನಾಥಾ"[2]**

ಇಲ್ಲಿ ಶರಣರು ಸಂಪಾದನೆ, ಸಂಪತ್ತು, ಹಣದ ಮಹತ್ವವನ್ನು ಸಹಜವಾಗಿ ಪ್ರಶ್ನೆ ಹಾಕಿ ಸಂವಾದ ಮಾಡಿರುವುದನ್ನು ಸರಳ ಭಾಷೆಯೊಂದಿಗೆ ಲೋಕನೀತಿಯನ್ನಾಗಿ ಕಾಣಬಹುದಾಗಿದೆ. ಮುತ್ತು, ರತ್ನ, ಒಡವೆ, ಚಿನ್ನ, ಸಂಪತ್ತುಗಳನ್ನು ಅಗತ್ಯಇದ್ದಷ್ಟೇ ಪಡೆಯಬೇಕು. ಸಂಪತ್ತಿನ ಕೇಂದ್ರಿಕರಣದಿಂದ ಇದು ಹೆಚ್ಚು ಪ್ರಚಾರಕ್ಕೆ ಬರತೊಡಗಿತು. "ಇಂದಿಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನದೇ ರಾಮನಾಥಾ"[3] ಬಡತನ, ಸಿರಿತನ ಏನೇ ಇರಲಿ; ಆರಾಧನೆ,

ದಾಸೋಹ, ಸಂಪತ್ತಿನ ಸಂಗ್ರಹ, ನಿರಾಕರಣೆಯಂತಹ ಮಹತ್ವದ ವಿಚಾರಗಳನ್ನು ಕಾಣಬಹುದು. ಶ್ರೀಮಂತರು ಅಧಿಕ ಸಂಪತ್ತು ಹೊಂದಿದ್ದರು ಕೂಡಾ ನಾವು ಅದನ್ನು ಕಾಣಲಾರೆವು. ಆದರೆ ಆ ಸಂಪತ್ತಿನ ಆಸೆಯ ಕಾರಣದಿಂದ ಕೌರವನು ಯುದ್ಧದಲ್ಲಿ ಸೋತನು. ಅದು ಆತನನ್ನು ಮೂರು ಅಡಿಗೆ ಬಂದು ತಲುಪುವಂತೆ ಮಾಡಿತು. ಸಿರಿಸಂಪತ್ತು ಎಂಬ ಆಸೆಯು ಮೋಹದ ರಚನೆಯನ್ನು ಹೊಂದಿದೆ. ಇದನ್ನು ತಿಳಿದು ಬದುಕಬೇಕು. ಹೀಗೆ ಹಣದಿಂದ ಉತ್ತಮ ಕಾರ್ಯಗಳನ್ನು ಮಾಡಲು ಪ್ರಮುಖವಾದ ಅಂಶಗಳನ್ನು ತಿಳಿಯಬಹುದಾಗಿದೆ.

**"ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು**
**ಒರೆಯಾವಿನ ಬೆನ್ನ ಹರಿಯಲೇಕಯ್ಯಾ?**
**ಲಜ್ಜೆಗೆಡಲೇಕೆ ನಾಣುಗೆಡಲೇಕೆ?**
**ಕೂಡಲಸಂಗಮದೇವನುಳ್ಳನ್ನಕ್ಕ**
**ಬಿಜ್ಜಳನ ಭಂಡಾರವೆನಗೇಕಯ್ಯಾ"**[4]

ಬಸವಣ್ಣನವರು ಈ ವಚನದ ಮೂಲಕ ಕಾಯಕ ಜೀವಿಗಳ ಶ್ರಮದಿಂದ ಒಂದು ದೇಶದ ಖಜಾನೆ ತುಂಬಿರುತ್ತದೆ ಎಂದು ಸಾರುತ್ತಾರೆ. ಕಾಯಕ ಜೀವಿಗಳ ಸಂಪತ್ತು ಹಾಲಿನಂತೆ ಹರಿಯುವ ಸಂದರ್ಭದಲ್ಲಿ ಬಿಜ್ಜಳ ಭಂಡಾರವೇಕೆ ಬೇಕು ಎನ್ನುತ್ತಾರೆ. ಬದುಕಿನಲ್ಲಿ ಹಲವಾರು ತೊಂದರೆ, ಸಂಕಷ್ಟಗಳು ಬರುತ್ತವೆ. ಇದು ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನು ಬೀರುತ್ತದೆ. ಆಗ ಸಮಂಜಸವಾಗಿ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು. ಕೆಲವರು ಕಾಯಕ ಮಾಡದೆ ಅಹಿತಕರವಾದ ಮಾರ್ಗದಿಂದ ಸಫಲತೆಯನ್ನು ಪಡೆಯಲು ಪ್ರಯತ್ನಿಸುವರು. ಜೊತೆಗೆ ಪರರ ಹಣವನ್ನು ಚೇಳು ಎಂದು ತಿಳಿದು ಅದನ್ನು ಮುಟ್ಟಬಾರದು. ಕೆಲವು ಜನರು ಮೋಸ, ವಂಚನೆಯ ಮೂಲಕ ತಮ್ಮ ಮಾತಿನಿಂದಲೇ ಸ್ವ ಕಾರ್ಯವನ್ನು ಸಾಧಿಸಿಕೊಳ್ಳುವವರು. ನಮಗೆ ಬೇರೆಯವರ ಸಂಪತ್ತು, ಹಣ ಆಕಸ್ಮಿಕವಾಗಿ ದೊರೆತರೆ ಅದನ್ನು ತೆಗೆದುಕೊಳ್ಳುವುದಿಲ್ಲ ಎಂಬ ದೃಢಸಂಕಲ್ಪವನ್ನು ಹೊಂದಬೇಕು. ಹೀಗೆ ನಮ್ಮಿಂದಾಗುವ ಕಾಯಕದ ಫಲದಿಂದ ಉತ್ತಮ ಕೆಲಸ ಮಾಡಬೇಕೆಂಬ ಸಂದೇಶ ಇಲ್ಲಿದೆ.

**"ಲಂಚ ವಚನಕ್ಕೆ ಕೈಯಾನದ ಭಾಷೆ**
**ಬಟ್ಟೆಯಲ್ಲಿ ಹೊನ್ನು ವಸ್ತ್ರಬಿದ್ದಿದ್ದಡೆ,**
**ಕೈ ಮುಟ್ಟಿಎತ್ತಿದೆಡೆ ನಾದಡೆಅಯ್ಯಾ, ನಿಮ್ಮಾಣೆ**
**ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ**
**ಶಂಭುಜಕ್ಕೇಶ್ವರದೇವಯ್ಯಾ, ನಿಮ್ಮಾಣೆ"**[5]

ಶಿವಶರಣೆ ಸತ್ಯಕ್ಕ ಇಲ್ಲಿ ಹಣ, ಸಂಪತ್ತಿನ ಬಗೆಗಿನ ತತ್ವ ಸಿದ್ಧಾಂತದ

ಪರಿಪಾಲನೆಯನ್ನು ತಿಳಿಸುವವಳು. ವಚನಕಾರ್ತಿಯರು ಸಹ ಕಾಯಕ ತತ್ವದ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಅನುಭವಿಸಿದರು. ಆಯ್ದಕ್ಕಿ ಲಕ್ಕಮ್ಮಳು ಕಾಯಕ ತತ್ವದಂತೆ ಜೀವನ ಸಾಗಿಸುತ್ತಾಳೆ. "ಆವ ಕಾಯಕ ಮಾಡಿದೊಡೆ ಒಂದೇ ಕಾಯಕ" ಎಂದು ಗಂಗಮ್ಮ ಹೇಳಿದಂತೆ ಕಾಯಕದಲ್ಲಿ ಮೇಲು–ಕೀಳಿಲ್ಲ. ಗಂಗೇಶ ಮಸಣಯ್ಯನ ಪುಣ್ಯಸ್ತ್ರೀ ಅಕ್ಕಮ್ಮ "ಖಂಡಿತ ಕಾಯಕದ ವ್ರತಾಂಗಿಯ ಮಾಡಿದ ಇರುವೆಂತಂದಡೆ ಕೃತ್ಯದ ನೇಮದೆ ಸುಯಿಧಾನವೆ ಅಚ್ಚೊತ್ತಿದಂತೆ ತಂದು ಒಡೆಯರು ಭಕ್ತರು ತನ್ನ ಮಡದಿ ಸಹಿತ ಒಡಗೂಡಿ ಎಡೆ ಮಾಡಿ ಗಡಿಗೆ ಭಾಜನದಲ್ಲಿ ಮತ್ತೊಂದೆಡೆಗೆ ಈಡಿಲ್ಲದಂತೆ" ಭಕ್ತಿ ಶ್ರದ್ಧೆಯಿಂದ ಕಾಯಕ ಮಾಡಿ ಬಂದ ಆದಾಯವನ್ನು ಸದ್ವಿನಿಯೋಗ ಮಾಡುವ ಪರಿಯನ್ನು ಅಕ್ಕಮ್ಮ ಹೇಳಿದ್ದಾಳೆ. ಒಟ್ಟಿನಲ್ಲಿ ಎಲ್ಲ ಬಸವಾದಿ ಶಿವಶರಣರು 'ಆರ್ಥಿಕತೆ' ಎಂಬ ಪರಿಕಲ್ಪನೆಯ ಕುರಿತು ತಮ್ಮ ವಿಚಾರಗಳನ್ನು, ಚಿಂತನೆಗಳನ್ನು ವಚನಗಳಲ್ಲಿ ಅನಾವರಣಗೊಳಿಸಿರುವುದು ಅತ್ಯದ್ಭುತವಾಗಿ ಕಂಡು ಬರುತ್ತವೆ.

**ಅಡಿಟಿಪ್ಪಣಿಗಳು:**


1. ನಾಗಭೂಷಣಸ್ವಾಮಿ ಓ. ಎಲ್. (ಸಂ). (2014). ವಚನ ಸಾವಿರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. 170
2. ರಾಮರೆಡ್ಡಿ ಎಸ್. ರಡ್ಡೇರ. (2005). ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ. ವೆಂಕಾಮಣಿ ಪ್ರಕಾಶನ. ರಾಣೆಬೆನ್ನೂರು. ಪು.ಸಂ. 28
3. ರಾಮರೆಡ್ಡಿ ಎಸ್. ರಡ್ಡೇರ. (2005). ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ. ವೆಂಕಾಮಣಿ ಪ್ರಕಾಶನ. ರಾಣೆಬೆನ್ನೂರು. ಪು.ಸಂ. 28
4. ಹಿರೇಮಠ ಆರ್. ಸಿ. (ಸಂ). (1968). ಶ್ರೀ ಬಸವೇಶ್ವರ ವಚನಾಮೃತ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ಪು.ಸಂ. 7
5. ಮರುಳಸಿದ್ದಪ್ಪ ಕೆ. & ನಾಗರಾಜ ಕಿ. ರಂ. (ಸಂ). (1979). ವಚನ ಕಮ್ಮಟ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. ಪು.ಸಂ. 141

**ಪರಾಮರ್ಶನ ಗ್ರಂಥಗಳು:**

1. ಮರುಳಸಿದ್ದಪ್ಪ ಕೆ. & ನಾಗರಾಜ ಕಿ. ರಂ. (ಸಂ). (1979). ವಚನ ಕಮ್ಮಟ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.
2. ರಾಮರೆಡ್ಡಿ ಎಸ್. ರಡ್ಡೇರ. (2005). ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ. ವೆಂಕಾಮಣಿ ಪ್ರಕಾಶನ. ರಾಣೆಬೆನ್ನೂರು.
3. ನಾಗಭೂಷಣಸ್ವಾಮಿ ಓ. ಎಲ್. (ಸಂ). (2014). ವಚನ ಸಾವಿರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ಹಿರೇಮಠ ಆರ್. ಸಿ. (ಸಂ). (1968). ಶ್ರೀ ಬಸವೇಶ್ವರ ವಚನಾಮೃತ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
5. ಕಲಬುರ್ಗಿ ಎಂ. ಎಂ. (1993). ಸಂಕೀರ್ಣ ವಚನ ಸಂಪುಟಗಳು. ಕನ್ನಡ ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.